ಸೆಲೆಬ್ರಿಟಿ

# ಮಹಿಳಾ ಸಬಲೀಕರಣದ ದೇವತೆ!



■ ಪ್ರವೀಣ ಕುಲಕರ್ಣಿ

ಸೀತವ್ವ ಜೋಡಟ್ಟಿ ಅವರ ಹೆಸರನ್ನು ನೀವಿನ್ನೂ ಕೇಳಿಲ್ಲವೇ? ಏಳು ವರ್ಷಗಳ ಹಿಂದೆ ಪದ್ಮಶ್ರೀ ಪುರಸ್ಕಾರಕ್ಕೆ ಪಾತ್ರರಾದ ಕನ್ನಡತಿ ಅವರು. ಉತ್ತರ ಕರ್ನಾಟಕದ ಜನ, ಅದರಲ್ಲೂ ಬೆಳಗಾವಿ ಭಾಗದ ಜನ, ಸೀತವ್ವ ಅವರನ್ನು ಚೆನ್ನಾಗಿ ಬಲ್ಲರು. 'ಮಹಿಳಾ ಸಬಲೀಕರಣದ ದೇವತೆ' ಎಂದು ಪ್ರಧಾನಿಯಿಂದ ಪ್ರಶಂಸೆಗೆ ಪಾತ್ರರಾದವರು ಅವರು. ಈ ಪ್ರಶಂಸೆಯ ಮಾತೇ ಹೇಳುವಂತೆ, ನಾಲ್ಕು ಸಾವಿರಕ್ಕೂ ಹೆಚ್ಚು ನೊಂದ ಹೆಣ್ಣುಮಕ್ಕಳ ಕಣ್ಣೀರು ಒರೆಸಿದವರು ಆಕೆ. ಸೀತವ್ವ ಅವರು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿರುವ ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆಗೆ (ಮಾಸ್) ನೊಂದವರ ಕಣ್ಣೀರು ಒರೆಸುವುದು ಮತ್ತು ಬದುಕಿಗೊಂದು ಆಧಾರ ರೂಪಿಸಿಕೊಡುವುದೇ ಕೆಲಸ.

ದೇವದಾಸಿ ಎಂಬ ಅನಿಷ್ಟ ಪದ್ಧತಿಯಿಂದ ಶೋಷಣೆಗೆ ಒಳಗಾದವರು. ಸೀತವ್ವ ಅವರದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಬ್ಬೂರು ಗ್ರಾಮ. ಅವರ ತಂದೆ–ತಾಯಿಗೆ ಒಟ್ಟಾರೆ ಒಂಬತ್ತು ಜನ ಹೆಣ್ಣು ಮಕ್ಕಳು. ಸಾಮಾಜಿಕ ಮತ್ತು ಆರ್ಥಿಕ ಒತ್ತಡದಿಂದ ನಲುಗಿದ್ದ ಆ ಕುಟುಂಬ, ದೈವ ಒಲಿದರೆ ಗಂಡು ಮಗುವೊಂದು ಕುಟುಂಬಕ್ಕೆ ದಕ್ಕೀತು ಎಂಬ ಆಸೆಯಿಂದ ಸೀತವ್ವ ಅವರನ್ನು ದೇವದಾಸಿಯನ್ನಾಗಿ ಮಾಡಿತು. ಪೂಜಾರಿಯಿಂದ ಕೊರಳಲ್ಲಿ ಮುತ್ತಿನ ಸರ ಕಟ್ಟಿಸಿಕೊಂಡಾಗ ಅವರಿಗೆ ಏಳರ ಪ್ರಾಯ. ಎರಡನೇ ಹಂತದಲ್ಲಿ, ದೇವದಾಸಿ 'ಪಟ್ಟ' ಕಟ್ಟುವಾಗ ಅವರಿಗೆ 14 ವರ್ಷಗಳಾಗಿದ್ದವು. 'ಒಂಬತ್ತು ದಿನಗಳವರೆಗೆ ಮೈತುಂಬಾ ಅರಿಷಿನ ಬಳಿದು, ಬೇವಿನ ನೀರಿನಲ್ಲಿ ಸ್ನಾನ ಮಾಡಿಸಿದರು. ಕೊನೆಯ ದಿನ ಸೀರೆ ತೊಡಿಸಿ, ಕೊರಳಿನಲ್ಲಿ ಗಂಟು ಬಿಗಿದರು. ಪೂಜಾರಪ್ಪ ಮಂತ್ರ ಉಚ್ಚರಿಸಿದ. ಎಲ್ಲರ ಕೇಂದ್ರಬಿಂದುವಾಗಿದ್ದ ನನಗೇನೋ ಆ ಕ್ಷಣದಲ್ಲಿ ಹರ್ಷವಾಗಿತ್ತು. ಅದು ನನ್ನ ಬಾಳಿನ ನರಕದ ದಾರಿ ಎನ್ನುವುದು ಆಗ ಗೊತ್ತಿರಲಿಲ್ಲ' ಎಂದು ಸೀತವ್ವ ನೆನಪಿಸಿಕೊಳ್ಳುತ್ತಾರೆ.

ವ್ಯಕ್ತಿಯೊಬ್ಬರಿಗೆ ಈ ಹುಡುಗಿಯನ್ನು 'ಮಾರಾಟ' ಮಾಡಲಾಯಿತು. ಹರೆಯಕ್ಕೆ ಬರುವ ಮುನ್ನವೇ ಅವರ ಕಂಕುಳಲ್ಲಿ ಎರಡು ಮಕ್ಕಳಿದ್ದವು. ನಂತರ ಆ ಸಂಬಂಧದಿಂದ ದೂರವಾಗಿ ಇನ್ನೊಬ್ಬರ ಪಾಲಾದರು. ಮತ್ತೊಂದು ಮಗುವಿನ ತಾಯಿಯಾದರು. ಅನಿಷ್ಟ ಪದ್ಧತಿಯ ಬೆಂಕಿ ಕುಲುಮೆಯನ್ನು ಹಾದು ಬಂದ ಸೀತವ್ವ, ತಮ್ಮ ಹಾಗೆ ಇತರ ಮಹಿಳೆಯರು ಸಂಕಟಕ್ಕೆ ಈಡಾಗಬಾರದು ಎಂಬ ದೃಢಸಂಕಲ್ಪದಿಂದ ಸಂಘಟನೆ ಮತ್ತು ಸಬಲೀಕರಣಕ್ಕೆ ಒತ್ತು ಕೊಟ್ಟರು. 'ನನ್ನ ಬದುಕಿನಲ್ಲಿ ಇದುವರೆಗೆ ಶೋಷಣೆಗೆ ಒಳಗಾಗಿದ್ದು ಸಾಕು. ಇನ್ನುಮುಂದೆ ನನ್ನಂತೆ ಇತರರು ಬಲಿಪಶು ಆಗುವುದು ಬೇಡ' ಎಂಬ ದೃಢವಾದ ಇಚ್ಛಾಶಕ್ತಿಯೇ ನನ್ನನ್ನು ಮಾಸ್ ಸಂಸ್ಥೆಯತ್ತ ಕರೆತಂದಿತು ಎಂದು ಅವರು ಹೇಳುತ್ತಾರೆ.

ದೇವದಾಸಿಯರು ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಧಾರ್ಮಿಕ ಜಾತ್ರೆಗಳಲ್ಲಿ ಪಾಲ್ಗೊಳ್ಳಲು ಪ್ರಯಾಣಿಸುತ್ತಿದ್ದರು. ಅವರನ್ನು ಸಂಘಟಿಸಿ, ಅವರಲ್ಲಿ ಜಾಗೃತಿ ಮೂಡಿಸಿದ ಶ್ರೇಯ ಸೀತವ್ವ ಅವರಿಗೆ ಸಲ್ಲಬೇಕು. ಮೂರು ಸಾವಿರ ಸದಸ್ಯರನ್ನು ಹೊಂದಿರುವ ಮಾಸ್ ಸಂಸ್ಥೆಯು ದೇವದಾಸಿಯಂತಹ ಅನಿಷ್ಟ ಪದ್ಧತಿಯ 'ಟ್ರ್ಯಾಪ್'ನಲ್ಲಿ ಸಿಕ್ಕು ನಲುಗಿದವರಿಗೆ ಹೊಸ ಬದುಕು ನೀಡಲು ಹಾತೊರೆಯುತ್ತಿದೆ. ದೇವದಾಸಿ ಮಕ್ಕಳಿಗೆ ಶಿಕ್ಷಣ ನೀಡುವುದು, ಅವರಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ತರಬೇತಿ ನೀಡುವುದು, ಕಾನೂನು ಹೋರಾಟಗಳಲ್ಲಿ ನೆರವು ನೀಡುವುದು – ಹೀಗೆ ಇಡೀ ಸಮುದಾಯವನ್ನು ಮೇಲಕ್ಕೆ ಎತ್ತಲು ಮಾಸ್ ಕಾರ್ಯಪ್ರವೃತ್ತವಾಗಿದೆ. ಟೇಲರಿಂಗ್ ವೃತ್ತಿ ತರಬೇತಿ ನೀಡುವ ಮೂಲಕ, ಕುರಿ, ಎಮ್ಮೆ, ಹಸು ಖರೀದಿಗೆ ಹಣಕಾಸಿನ ನೆರವು ನೀಡುವ ಮೂಲಕ ಮಾಜಿ ದೇವದಾಸಿಯರಿಗೆ ಸ್ವಾವಲಂಬನೆಯ ಬದುಕು ಕಟ್ಟಿಕೊಟ್ಟಿದ್ದಾರೆ ಸೀತವ್ವ.

ಬಡತನದ ಬೇಗೆಯಲ್ಲಿ ಬೆಂದ ಹೆಣ್ಣು ಮಕ್ಕಳನ್ನು, ಅವರು ಆರ್ಥಿಕವಾಗಿ ದುರ್ಬಲವಾಗಿರುವುದನ್ನೇ ಅಸ್ತ್ರ ಮಾಡಿಕೊಂಡು, ಲೈಂಗಿಕ ಶೋಷಣೆಗೆ ಗುರಿ ಮಾಡುತ್ತಿರುವುದು ಶತಮಾನದಿಂದ ಚಾಲ್ತಿಯಲ್ಲಿರುವ ಅನಿಷ್ಟ. ಒಂದೇ ದಿನದಲ್ಲಿ ಅದನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲ. ಆದರೆ, ಅದರ ವಿರುದ್ಧದ ನಮ್ಮ ಹೋರಾಟ ನಿರ್ಣಾಯಕವಾಗಿದ್ದು, ಈ ಪಿಡುಗಿಗೆ ಕೊನೆ ಹಾಡಲಿದ್ದೇವೆ. ಸರ್ಕಾರ ಕೂಡ ಆ ನಿಟ್ಟಿನಲ್ಲಿ ಕಾನೂನು ಮಾಡಲು ಹೊರಟಿದೆ ಎಂದು ಈ ಸಾಧಕಿ ದಿಟ್ಟತನದಿಂದ ಹೇಳುತ್ತಾರೆ.

ದೇವದಾಸಿ ಪದ್ಧತಿಗೆ ತಳ್ಳಲ್ಪಟ್ಟ ಬಾಲಕಿಯರು, ಯುವತಿಯರು ಸ್ವತಃ ಅಪಾಯದ ಅಂಚಿನಲ್ಲಿ ಬದುಕುತ್ತಾರೆ. ಅವರಿಗೆ ಜನಿಸಿದ ಮಕ್ಕಳ ಪಾಡಂತೂ ಇನ್ನಷ್ಟು ನಿಕೃಷ್ಟವಾಗಿರುತ್ತದೆ. ಅವರೂ ಲೈಂಗಿಕವಾಗಿ ಶೋಷಣೆಗೆ ಒಳಗಾಗುವ ಅಪಾಯ ಹೆಚ್ಚಿರುತ್ತದೆ. ಸಮಾಜದಲ್ಲಿ ಬೇರೂರಿರುವ ಈ ಪೆಡಂಭೂತವನ್ನು ತೊಲಗಿಸುವುದು ಅಷ್ಟು ಸುಲಭವಲ್ಲ. ದೇವದಾಸಿ ಪದ್ಧತಿ ನಿಷೇಧಕ್ಕೆ ಒಳಗಾಗಿ ದಶಕಗಳೇ ಉರುಳಿವೆ. ಈ ಆಚರಣೆ ವಿರುದ್ಧ ಕಠಿಣ ಕಾನೂನುಗಳಿವೆ. ಏನೇ ಕಾನೂನುಗಳಿದ್ದರೂ ನೆಲದ ವಾಸ್ತವ ಬೇರೆಯೇ ಇರುತ್ತದೆ. ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಹೆಣ್ಣು ಮಕ್ಕಳನ್ನು ಸರಕುಗಳ ರೀತಿಯಲ್ಲಿ ಬಿಕರಿ ಮಾಡುವ ವ್ಯವಸ್ಥೆಯನ್ನು ಒಡಲಲ್ಲಿ ಇಟ್ಟುಕೊಂಡಿರುವ ಸಮಾಜಕ್ಕೆ ಹೃದಯವೇ ಇಲ್ಲ. ಆದರೆ, 'ಮಾಸ್' ಸಂಸ್ಥೆಯು ಅಂತಹ ಸಮಾಜದಲ್ಲೇ ಪರಿವರ್ತನೆಯನ್ನು ತರುತ್ತಿದೆ. ಕರ್ನಾಟಕದಲ್ಲಿ ದೇವದಾಸಿ ಪದ್ಧತಿಯ ಹಾವಳಿ ತೀರಾ ಹೆಚ್ಚಾಗಿದ್ದ ಜಿಲ್ಲೆ ಬೆಳಗಾವಿ. ಬೆಳಗಾವಿ ಜಿಲ್ಲೆಯಾದ್ಯಂತ 'ಮಾಸ್' ಸಕ್ರಿಯವಾಗಿದೆ. ಮಾಜಿ ದೇವದಾಸಿಯರ ಕಲ್ಯಾಣಕ್ಕಾಗಿ ಮುನ್ನೂರಕ್ಕೂ ಅಧಿಕ ಸ್ವಸಹಾಯ ಗುಂಪುಗಳನ್ನೂ 'ಮಾಸ್' ಮೂಲಕ ರಚಿಸಲಾಗಿದೆ.

ಪ್ರತಿದಿನ ಬೆಳಿಗ್ಗೆ ಏಳುವಾಗಲೂ ನನ್ನಂತೆ ತೊಂದರೆಗೆ ಒಳಗಾದ ಮಹಿಳೆಗೆ ನೆರವಾಗಬೇಕು. ಸಮಾಜದಲ್ಲಿ ಪರಿವರ್ತನೆ ತರಬೇಕು ಎಂಬ ಆಕಾಂಕ್ಷೆಯಿಂದ ಚೇತನವನ್ನು ಒಟ್ಟುಗೂಡಿಸಿಕೊಂಡು ಏಳುತ್ತೇನೆ ಎನ್ನುತ್ತಾರೆ ಸೀತವ್ವ. ಅವರಿಗೊಂದು ಸಲಾಂ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65